**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 10.11.2025**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

1. ನಾನು ಫೋಟೋಗ್ರಾಫರ್ ಕೆಲಸ ಮಾಡುತ್ತಿದ್ದೇನೆ. ನಾನು 7 ನೇ ತರಗತಿವರೆಗೆ ಓದಿರುತ್ತೇನೆ. ನಾನು ದಾವಾಸ್ತಿಯನ್ನು ಸ್ವಾಮಿ ಎಂಬುವವರಿಂದ ಖರೀದಿ ಮಾಡಿರುತ್ತೇನೆ. ಸ್ವಾಮಿರವರೇ ನನ್ನ ಮನೆ ಬಳಿ ಬಂದು ಜಮೀನನ್ನು ಮಾರಲು ಕೇಳಿಕೊಂಡರು. ನೀವು ಹೇಳುವಂತೆ ಸ್ವಾಮಿರವರು ನಿಮ್ಮ ಮನೆ ಬಳಿ ಬಂದು ಜಮೀನನ್ನು ತೆಗೆದುಕೊಳ್ಳಿ ಕೇಳಿಲ್ಲ ಎಂದರೆ ಸರಿಯಲ್ಲ. ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಕ್ರಯಕ್ಕೆ ತೆಗೆದುಕೊಂಡೆನು. ದಾವಾ ಸ್ವತ್ತು ಮೂಲವಾಗಿ ಜಯಮ್ಮನವರಿಗೆ ಸಾಗುವಳಿ ಮೂಲಕ ಕಿಮ್ಮತ್ತು ಕಟ್ಟಿ ಬಂದಿತ್ತು. ಜಯಮ್ಮನವರಿಗೆ ಬಂದ ದಾಖಲೆಯನ್ನು ನಾನು ನೋಡಿದ್ದೇನೆ. ದಾವಾ ಸ್ವತ್ತು ಎಸ್ ಸಿ ಎಸ್ ಟಿ ಗಳಿಗೆ ಸರ್ಕಾರದಿಂದ ಮಂಜೂರಾದ ಜಾಗ ಎಂದರೆ ಸರಿ. ದಾವಾ ಸ್ವತ್ತು ಮಂಜೂರು ಮಾಡಬೇಕಾದರೆ ಸರ್ಕಾರ ವಿಧಿಸಿದ್ದ ಷರತ್ತುಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸಾಕ್ಷಿ ಸ್ವತಃ ಕಿಮ್ಮತ್ತು ಕಟ್ಟಿ 15 ವರ್ಷದ ನಂತರ ಆಗಿತ್ತು ಎಂದು ಹೇಳುತ್ತಾರೆ. ನೀವು ಆಸ್ತಿಯನ್ನು ಮಂಜೂರಾದ 15 ವರ್ಷದ ಒಳಗೆ ಖರೀದಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಸ್ವತ್ತನ್ನು ಖರೀದಿಗೆ ಪಡೆದುಕೊಳ್ಳುತ್ತಿದ್ದೆ ಎಂದು

*ಪ್ರತಿವಾದಿಗಳಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅನುಭವದಲ್ಲಿ ಪ್ರತಿವಾದಿಗಳು ಇದ್ದಾರೆ ಎಂದರೆ ಸರಿಯಲ್ಲ. ನೀವು ಸ್ವತ್ತಿಗೆ ಕಂದಾಯ ಕಟ್ಟುತ್ತಿಲ್ಲ ಎಂದರೆ ಸರಿಯಲ್ಲ.*

***ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಿ ಮುಂದೂಡಲಾಯಿತು.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***